# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಸಂಕ್ರಾಂತಿ ಉತ್ಸವದ ಪ್ರಯುಕ್ತ ರಾಷ್ಟ್ರೀಯ ಸೇವಿಕಾ ಸಮಿತಿ ವತಿಯಿಂದ ಬೆಂಗಳೂರಿನ 4 ಕಡೆಗಳಲ್ಲಿ ನಡೆದ ಪಥಸಂಚಲನದಲ್ಲಿ 700ಕ್ಕೂ ಹೆಚ್ಚು ಗಣವೇಷಧಾರಿ ಮಾತೆಯರು ಭಾಗವಹಿಸಿದರು.


ಸಂಪುಟ : 39  ಸಂಚಿಕೆ : 12  ಹೇಮಲಂಬಿ–ಮಾಘ  ಕಲಿಯುಗಾಬ್ದ 5119  1–2–2018  ತ್ರೈವಾರ್ಷಿಕ : ರೂ. 150.00  ಬಿಡಿ ಪ್ರತಿ : ರೂ. 3.00  ಪುಟಗಳು : 4


## ಶ್ರೀಗುರೂಜಿ, ಸಮಾಜವೃಕ್ಷವನ್ನು ಬೇರಿನಿಂದಲೇ ಗಟ್ಟಿಗೊಳಿಸಿದ ದೃಷ್ಟಾರ

ಡಾ॥ ಕೇಶವ ಬಲಿರಾಮ್ ಹೆಡಗೇವಾರ್ ಅವರು ಭೂಮಿಯನ್ನು ಹಸನುಗೊಳಿಸಿ, ಬಿತ್ತಿ, ಮೊಳಕೆಯೊಡೆಸಿ, ಪೋಷಿಸಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್)ಕ್ಕೆ ವಟವೃಕ್ಷದ ರೂಪ ನೀಡಿದವರು ಶ್ರೀ ಗುರೂಜಿ ಎಂದೇ ಲೋಕವಿಖ್ಯಾತರಾದ ಮಾಧವ ಸದಾಶಿವರಾವ್ ಗೋಳ್ವಲ್ಕರ್ (1906–1973) ಅವರು. ಡಾ॥ ಜೀ ಅವರ ಕಲ್ಪನೆಯ ವ್ಯಕ್ತಿನಿರ್ಮಾಣ ಕಾರ್ಯವನ್ನು ಇನ್ನಷ್ಟು ಸದೃಢಗೊಳಿಸುತ್ತಾ, ಹೀಗೆ ನಿರ್ಮಾಣಗೊಂಡ ವ್ಯಕ್ತಿಗಳಿಗೆ ಸಮಾಜ ಹಾಗೂ ರಾಷ್ಟ್ರವನ್ನು ಸಶಕ್ತಗೊಳಿಸಲು ಅಗತ್ಯವಾದ ಎಲ್ಲ ಕ್ಷೇತ್ರಗಳಲ್ಲಿ ಕಾರ್ಯಶೀಲರಾಗುವಂತೆ ಮಾಡಿದವರು ಶ್ರೀಗುರೂಜಿ. ಅವರ ಮಾರ್ಗದರ್ಶನದಿಂದ ಪ್ರಾರಂಭವಾದ ಹತ್ತುಹಲವು ಸಂಘಟನೆಗಳು ಇಂದು ತಮ್ಮ ಕ್ಷೇತ್ರದಲ್ಲಿ ಜಗತ್ತಿನಲ್ಲಿಯೇ ನಂಬರ್ ಒನ್ ಸ್ವಯಂಸೇವಾ ಸಂಘಟನೆಗಳಾಗಿ ಬೆಳೆದು ನಿಂತಿರುವುದನ್ನು ನಾವು ಕಾಣಬಹುದು. ಜಗತ್ತಿನೆಲ್ಲೆಡೆ ಮಹತ್ತ್ವ ಪಡೆದುಕೊಂಡಿರುವ ಆರೆಸ್ಸೆಸ್‌ಗೆ ಒಂದು ಸ್ಪಷ್ಟವಾದ ವೈಚಾರಿಕತೆಯನ್ನು ನೀಡಿದವರು ಅವರು. ಭಾರತದ ಸಮಾಜವೃಕ್ಷವನ್ನು ಬೇರಿನಿಂದಲೇ ಗಟ್ಟಿಗೊಳಿಸಲು ಪ್ರಯತ್ನಿಸಿದ ಶ್ರೀ ಗುರೂಜಿ ಅವರ ಜಯಂತಿಯ ಪ್ರಯುಕ್ತ (ಮಾಘ ಬಹುಳ ಏಕಾದಶಿ, ಫೆಬ್ರುವರಿ 11) ಅವರ ವಿಚಾರಗಳ ಸ್ಮರಣೆ ಇಲ್ಲಿದೆ.


- ‘ಭಾರತೀಯ’ ಎಂಬ ಪದವನ್ನು ಯಾವುದೇ ರೀತಿಯಲ್ಲಿ ತಿರುಚಿದರೂ ಅದರಿಂದ ಬೇರೆ ಯಾವುದೇ ಅರ್ಥ ಬರಲು ಸಾಧ್ಯವಿಲ್ಲ. ಅದರಿಂದ ಬರುವ ಅರ್ಥ ‘ಹಿಂದು’ ಎಂಬುದೇ ಆಗಿದೆ.

- ಭಾರತೀಕರಣವೆಂದರೆ ಒಬ್ಬನ ನಂಬಿಕೆಯ ಬೇರನ್ನು ಅಲುಗಾಡಿಸುವುದು ಎಂದರ್ಥವಲ್ಲ. ಅದು ಮಾತೃಭೂಮಿಯ ಪೂಜನಕ್ಕೆ ಪ್ರೇರಣಾ ಶಕ್ತಿ. ಭಾರತೀಕರಣ ಅಥವಾ ಹಿಂದೂ ರಾಷ್ಟ್ರ ಎಂದರೆ ಹಿಂದೂ ಧರ್ಮದ ಸಂಪ್ರದಾಯಗಳನ್ನು ಮುಸ್ಲಿಮರ ಅಥವಾ ಇತರರ ಮೇಲೆ ಹೇರುವುದು ಎಂದು ಹೇಳುವವರು ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯನ್ನು ಸರಿಯಾಗಿ ಅರ್ಥಮಾಡಿಕೊಂಡವರಲ್ಲ. ಎಲ್ಲಿಯವರೆಗೆ ಯಾವುದೇ ಜಾತಿ, ಮತ, ಪಂಥದ ಭಾವ ದೇಶಭಕ್ತಿಗೆ ಧಕ್ಕೆ ತರುವುದಿಲ್ಲವೋ ಅಲ್ಲಿಯವರೆಗೆ ಅವುಗಳ ಬಗ್ಗೆ ನಮ್ಮ ಯಾವುದೇ ವಿರೋಧವಿಲ್ಲ. ಎಲ್ಲಿಯವರೆಗೆ ಮಾತೃಭೂಮಿಯ ಪರಿಕಲ್ಪನೆ ಮುಸ್ಲಿಮರಲ್ಲಿ ಜಾಗೃತವಾಗಿರುತ್ತದೋ ಅಲ್ಲಿಯವರೆಗೆ ಅವರ ಸಂಪ್ರದಾಯ ಹಾಗೂ ವೈಯಕ್ತಿಕ ಕಾನೂನುಗಳಿಂದ ದೇಶಕ್ಕೆ ತೊಡಕಿಲ್ಲ.

### ಕೈಗೂಡಿದ ಆ ಕನಸು...

ಅಸ್ಪೃಶ್ಯತೆ ನಿವಾರಣೆಗಾಗಿ ಡಾ॥ ಬಾಬಾಸಾಹೇಬ ಅಂಬೇಡ್ಕರ್ ದೊಡ್ಡ ಸಂಘರ್ಷವನ್ನೇ ಮಾಡಿದ್ದರು. ಅದು ಮಹಾದ್ ಕೆರೆಯ ಸತ್ಯಾಗ್ರಹದ ಸಂದರ್ಭವಿರಲಿ ಅಥವಾ ನಾಸಿಕ್‌ನ ಕಾಳಾರಾಮ ದೇವಾಲಯದ ಸತ್ಯಾಗ್ರಹ ಸನ್ನಿವೇಶವಿರಲಿ, ಡಾ॥ ಅಂಬೇಡ್ಕರ್‌ರವರ ಇಂಗಿತ ಸ್ಪಷ್ಟವಾಗಿಯೇ ಇತ್ತು. ‘ಅಸ್ಪೃಶ್ಯತೆ ಆಚರಣೆಗೆ ಧರ್ಮದ ಮಾನ್ಯತೆ ಇಲ್ಲ’ ಎಂದು ಹಿಂದೂ ಧರ್ಮಾಚಾರ್ಯರು ಘೋಷಿಸಲೆಂದು ಅವರು ಆಗ್ರಹಪಡಿಸಿದ್ದರು.

ಡಾ॥ ಅಂಬೇಡ್ಕರ್‌ರ ಆ ಕೈಗೂಡದ ಕನಸು, ಕೊನೆಗೂ ಉಡುಪಿಯಲ್ಲಿ ಶ್ರೀಗುರೂಜಿ ಅವರ ಪ್ರಯತ್ನದಿಂದಾಗಿ ನನಸಾಯಿತು. ಧರ್ಮಾಚಾರ್ಯರೆಲ್ಲರೂ ಏಕಕಂಠದಿಂದ ‘ಹಿಂದವಾಃ ಸೋದರಾ ಸರ್ವೇ, ನ ಹಿಂದು ಪತಿತೋ ಭವೇತ್’ (ಹಿಂದುಗಳೆಲ್ಲ ಸೋದರರು, ಯಾವ ಹಿಂದುವೂ ಪತಿತನಲ್ಲ) ಎಂಬ ಉದ್ಘೋಷ ಹೊರಬಿತ್ತು.



- **ಒಡಕಿಗೆ ಜಾತಿ ಕಾರಣವೇ?**
  ಕಳೆದ ಸಾವಿರ ವರ್ಷಗಳ ಪರಕೀಯ ಆಕ್ರಮಣವನ್ನು ಎದುರಿಸುವಲ್ಲಿ ನಾವು ಹಿನ್ನಡೆ ಅನುಭವಿಸಿದೆವು. ಇದಕ್ಕೆ ನಮ್ಮೊಳಗಿನ ಒಡಕೇ ಕಾರಣ ಎಂಬುದು ನಿಜ. ಆದರೆ ಈ ಒಡಕಿಗೆ ಜಾತಿ ವ್ಯವಸ್ಥೆ ಕಾರಣವೆಂಬ ಒಂದೇ ಒಂದು ಉದಾಹರಣೆಯೂ ನಮ್ಮೆದುರಿಗಿಲ್ಲ. ಮಹಮ್ಮದ್ ಘೋರಿ ವಿರುದ್ಧದ ಸೆಣಸಾಟದಲ್ಲಿ ಪೃಥ್ವಿರಾಜನ ಸೋಲಿಗೆ ಕಾರಣ ಅವನ ಸ್ವಜಾತಿ ಬಂಧುವೇ ಆಗಿದ್ದ ಜಯಚಂದ್‌ನ ದ್ರೋಹವಾಗಿತ್ತು. ರಾಣಾ ಪ್ರತಾಪ ಸಿಂಹನಿಗೆ ಬೆನ್ನಲ್ಲಿ ಇರಿದವನು ಅವನ ಜಾತಿಯವನೇ ಆದ ರಾಜಾ ಮಾನಸಿಂಹ. ಶಿವಾಜಿಯನ್ನು ವಿರೋಧಿಸಿದವರು ಸ್ವಜಾತಿಯವರೇ ಆಗಿದ್ದರು. ಇಂತಹ ದ್ರೋಹಗಳಿಗೆ, ಆಮಿಷಕ್ಕೆ ಬಲಿ ಬೀಳುವ ದೌರ್ಬಲ್ಯ ಕಾರಣವೇ ಹೊರತು ಜಾತಿ ವರ್ಣ ವ್ಯವಸ್ಥೆಗಳಲ್ಲ. (ಇದೇ ವಾದವನ್ನು ಬಾಬಾಸಾಹೇಬ ಅಂಬೇಡ್ಕರ್ ಮೇ 25, 1949ರ ಸಂವಿಧಾನ ಸಭೆಯ ಕೊನೆಯ ಭಾಷಣದಲ್ಲಿ ಮುಂದಿಟ್ಟಿದ್ದಾರೆ.)

- ನಾವು ಜಾತಿ ಪದ್ಧತಿಯ ಪರವೂ ಇಲ್ಲ. ವಿರುದ್ಧವೂ ಇಲ್ಲ. ಆದರೆ ಜಾತಿಯ ಹೆಸರಿನಲ್ಲಿ ನಡೆಯುವ ಮೇಲು–ಕೀಳು, ಸ್ಪರ್ಶ–ಅಸ್ಪರ್ಶ, ಸವರ್ಣ–ಅವರ್ಣಗಳಿಗೆ ನಮ್ಮ ಬಲವಾದ ವಿರೋಧವಿದೆ.

- ರಾಷ್ಟ್ರ ಎಂದರೇನು ಎಂಬುದನ್ನು ತಿಳಿಯದಿದ್ದರೆ ರಾಷ್ಟ್ರಭಕ್ತಿ ಹುಟ್ಟುವುದಿಲ್ಲ. ರಾಷ್ಟ್ರಭಕ್ತಿಯ ಭಾವನೆಯಿಲ್ಲದಿದ್ದರೆ ಸ್ವಾರ್ಥವನ್ನು ಬಿಟ್ಟು ರಾಷ್ಟ್ರಕ್ಕಾಗಿ ಶ್ರಮಿಸುವುದು ಅಸಂಭವ.

- ಶಿಕ್ಷಣ, ಮಾನವನ ಆಂತರಿಕ ಕ್ಷಮತೆಯ ಪ್ರಕಟೀಕರಣವಾಗಿದೆ. ಸೂಚನೆಗಳನ್ನು ಮೆದುಳಿನಲ್ಲಿ ತುಂಬುವುದಷ್ಟೇ ಶಿಕ್ಷಣವಲ್ಲ. ಮಾನವನ ಮೆದುಳನ್ನು ರದ್ದಿ ವಸ್ತುಗಳ ಗೋದಾಮು ಮಾಡುವುದು ಶಿಕ್ಷಣದ ಗುರಿಯಲ್ಲ. ಮಾನವನಲ್ಲಿ ಇರುವ ಪ್ರತಿಭೆ ಹಾಗೂ ಕ್ಷಮತೆಯನ್ನು ಅವನ ಅರಿವಿಗೆ ತರುವುದೇ ಶಿಕ್ಷಣ.

> **ಶ್ರೀ ಗುರೂಜಿ ಅವರ ಸಂಪೂರ್ಣ ಜೀವನ ತಪೋಮಯವಾಗಿತ್ತು. ಅವರು ತ್ಯಾಗದ ಪ್ರತಿಮೂರ್ತಿಯಾಗಿದ್ದರು. ಪೂಜ್ಯ ಮಹಾತ್ಮಾ ಗಾಂಧೀಜೀ ಹಾಗೂ ಅವರಿಗಿಂತ ಹಿಂದೆ ಜನಿಸಿದ ದೇಶದ ಮಹಾಪುರುಷರ ಪರಂಪರೆಯಲ್ಲಿ ಶ್ರೀ ಗುರೂಜಿಯವರ ಜೀವನವೂ ಇತ್ತು.**
> – ಲೋಕನಾಯಕ ಜಯಪ್ರಕಾಶ್ ನಾರಾಯಣ

- ನಾವು ಪ್ರಾಜಾಪ್ರಭುತ್ವ ವ್ಯವಸ್ಥೆಯನ್ನು ಆರಿಸಿಕೊಂಡಿದ್ದೇವೆ. ಆದರೆ ಈ ವ್ಯವಸ್ಥೆಯು ಯಶಸ್ವಿಯಾಗಬೇಕಾದರೆ ಜನಸಾಮಾನ್ಯರಿಗೆ ಒಳ್ಳೆಯ ಶಿಕ್ಷಣ ನೀಡಿ ಅವರು ಪ್ರಬುದ್ಧರಾಗುವಂತೆ ಮಾಡುವುದು ಅಗತ್ಯ. ಕೇವಲ ಅಕ್ಷರ ಜ್ಞಾನದಿಂದ ಈ ಉದ್ದೇಶವು ಈಡೇರುವುದಿಲ್ಲ. ನಮ್ಮ ರಾಷ್ಟ್ರಜೀವನದ ರಾಜಕೀಯ, ಆರ್ಥಿಕ ಮತ್ತು ಇತರ ವಿಷಯಗಳ ಬಗ್ಗೆ ಜವಾಬ್ದಾರಿಯಿಂದ, ವಿವಿಧ ಪಕ್ಷಗಳ ನೀತಿ ನಿಲುವುಗಳ ಬಗ್ಗೆ ಜಾಗರೂಕತೆಯಿಂದ ವಿಚಾರ ಮಾಡುವಂತಾಗಬೇಕು.

- ರಾಜ್ಯಕ್ಕೆ ಆಧಾರವಾಗಿರುವ ಶಕ್ತಿ ಎಂದರೆ ಕಾನೂನಿನ ಬಗೆಗಿನ ಭಯ. ಆದರೆ, ರಾಷ್ಟ್ರದ ಬಗೆಗಿನ ಶಕ್ತಿ ಎಂದರೆ ಜನರ ಮನಸ್ಸಿನಲ್ಲಿರುವ ಭಾವನೆಗಳು. ರಾಷ್ಟ್ರವು ಜನರ ಭಾವನೆಗಳಿಂದ ನಿರ್ಮಾಣಗೊಂಡಿರುವಂತಹುದು. ಹೀಗಾಗಿ ರಾಷ್ಟ್ರವೆಂದರೆ ಪ್ರಜೆಗಳೇ ಎಂದು ನಾವು ಹೇಳಬಹುದು. ಯಾವ ರೀತಿಯ ಜನರನ್ನು ರಾಷ್ಟ್ರವೆನ್ನಬಹುದು? ಇದಕ್ಕೆ ಮೂರು ನಿಬಂಧನೆಗಳಿವೆ. ಮೊದನೆಯದು, ತಾವು ವಾಸಿಸುವ ಭೂಮಿಯ ಬಗೆಗೆ, ಅಲ್ಲಿನ ಜನರಿಗಿರುವ ಭಾವನಾತ್ಮಕ ಸಂಬಂಧ. ಎರಡನೆಯದಾಗಿ, ಅಲ್ಲಿನ ಜನರಿಗೆ ಇತಿಹಾಸದ ಘಟನೆಗಳ ಬಗೆಗೆ ಸಮಾನವಾದ ಅನುಭವಗಳು, ಅದು ಸುಖದ್ದಾಗಿರಬಹುದು, ದುಃಖದ್ದಾಗಿರಬಹುದು. ಮೂರನೆಯದ್ದು ಮತ್ತು ಬಹಳ ಮುಖ್ಯವಾದುದು ಸಮಾನ ಸಂಸ್ಕೃತಿ ಇರುವುದು.

- ಅನಾದಿಕಾಲದಿಂದ ಈ ದೇಶದಲ್ಲಿ ಒಂದು ಸಮಾನ ಜೀವನ ನಡೆದು ಬಂದಿದೆ. ಅನೇಕ ಮಹಾಪುರುಷರ ವಿಚಾರ, ಸದ್ಗುಣಗಳು, ತತ್ವಜ್ಞಾನ, ಸಮಾಜರಚನೆಯ ಸಿದ್ಧಾಂತ ಮತ್ತು ಜೀವನದ ಸಣ್ಣ ಪುಟ್ಟ ಅನುಭವಗಳಿಂದ ಜೀವನದ ಬಗ್ಗೆ ಒಂದು ಸ್ವಯಂಸ್ಫೂರ್ತ ಸ್ವಾಭಾವಿಕ ದೃಷ್ಟಿಕೋನವು ನಮ್ಮ ಸಮಾಜದಲ್ಲಿ ನಿರ್ಮಾಣವಾಗಿದೆ. ಈ ಸಾಮಾನ್ಯ ದೃಷ್ಟಿಕೋನವೇ ಸಂಸ್ಕೃತಿ. ಜಗತ್ತಿನೆದುರು ತಲೆಯೆತ್ತಿ ನಿಲ್ಲುವ ಪ್ರೇರಣಾ ಶಕ್ತಿಯನ್ನು ಅದು ನಮಗೆ ನೀಡಿದೆ. ನಮ್ಮನ್ನು ಒಂದು ಸೂತ್ರದಲ್ಲಿ ಅದು ಜೋಡಿಸಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಭಾರತದಲ್ಲಿರುವ ಸಂಸ್ಕೃತಿ ಒಂದೇ. ಅದರಿಂದಲೇ ಭಾರತದ ರಾಷ್ಟ್ರಜೀವನಕ್ಕೆ ಪ್ರೇರಣೆ.

- ತಮಿಳು, ಬಂಗಾಲಿ, ಮರಾಠಿ, ಕನ್ನಡ ಮತ್ತು ನಮ್ಮ ಎಲ್ಲ ಭಾರತೀಯ ಭಾಷೆಗಳೂ ರಾಷ್ಟ್ರಭಾಷೆಗಳು. ಅರಳಿದ ಅನೇಕ ಪುಷ್ಪಗಳಂತಿರುವ ಆ ಎಲ್ಲ ಭಾಷೆ ಮತ್ತು ಉಪಭಾಷೆಗಳಿಂದ ನಮ್ಮ ರಾಷ್ಟ್ರೀಯ ಸಂಸ್ಕೃತಿಯ ಸುಗಂಧವು ಪಸರಿಸುತ್ತಿದೆ. ಸಂಸ್ಕೃತವು ಈ ಎಲ್ಲ ಭಾಷೆಗಳ ಸ್ರೋತವಾಗಿದೆ. ಎಲ್ಲ ಭಾಷೆಗಳೊಡನೆ ತನ್ನ ಭವ್ಯ ಇತಿಹಾಸವನ್ನು ಹೊಂದಿರುವ ಸಂಸ್ಕೃತವು ನಮ್ಮ ರಾಷ್ಟ್ರದಲ್ಲಿ ಪರಸ್ಪರ ವ್ಯವಹಾರಕ್ಕೆ ಒಂದುಗೂಡಿಸುವ ಸೂತ್ರವಾಗಿದೆ.




## ಶಚೀಂದ್ರನಾಥ್ ಸಾನ್ಯಾಲ್ (1893 – 07.02.1942)

ಭಾರತದ ಸಶಸ್ತ್ರ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅಗ್ರಗಣ್ಯ ಕ್ರಾಂತಿಕಾರಿಗಳಲ್ಲಿ ಒಬ್ಬರಾಗಿ ಗುರುತಿಸಲ್ಪಡುವ ಶಚೀಂದ್ರನಾಥ್ ಸಾನ್ಯಾಲರು ಹುಟ್ಟಿದ್ದು ಕಾಶಿಯಲ್ಲಿ. ಸಶಸ್ತ್ರ ಕ್ರಾಂತಿಯ ಬೀಜಗಳನ್ನು ದೇಶದ ತುಂಬೆಲ್ಲ ಬಿತ್ತಿ ಭಗತ್ ಸಿಂಗ್, ರಾಮ್‌ಪ್ರಸಾದ್ ಬಿಸ್ಮಿಲ್, ಚಂದ್ರಶೇಖರ್ ಆಜಾದ್‌ರಂತಹ ಪುಷ್ಪಬೆಳೆ ಬೆಳೆದ ಅಪ್ರತಿಮ ಕ್ರಾಂತಿಕಾರಿ ಶಚೀಂದ್ರನಾಥ್ ಸಾನ್ಯಾಲ್. 1908ರಲ್ಲಿ ಕ್ವೀನ್ಸ್ ಕಾಲೇಜಿನ ತಮ್ಮ ಅಧ್ಯಯನದ ಕಾಲದಲ್ಲಿಯೇ ಕಾಶಿಯ ಮೊತ್ತಮೊದಲ ಕ್ರಾಂತಿಕಾರಿಗಳ ತಂಡವೊಂದನ್ನು ಕಟ್ಟಿದ್ದವರು. 1913ರಲ್ಲಿ ಫ್ರೆಂಚ್ ವಸತಿಯಾಗಿದ್ದ ಚಂದನ್ ನಗರದಲ್ಲಿ ಮತ್ತೊಬ್ಬ ಮಹಾನ್ ಕ್ರಾಂತಿಕಾರಿ ರಾಸ್ ಬಿಹಾರಿ ಬೋಸರನ್ನು ಭೇಟಿಯಾದರು. ಇಬ್ಬರು ಅದಮ್ಯ ಕ್ರಾಂತಿಕಾರಿಗಳ ಭೇಟಿಯ ಪರಿಣಾಮವಾಗಿ ಕ್ರಮಶಃ ಕಾಶಿ ಸಂಪೂರ್ಣ ಉತ್ತರ ಭಾರತದ ಕ್ರಾಂತಿಕಾರಿಗಳ ಕೇಂದ್ರಸ್ಥಳವಾಗಿ ಮಾರ್ಪಟ್ಟಿತ್ತು.

1914ರಲ್ಲಿ ಮೊದಲ ಮಹಾಯುದ್ಧವು ಮುಗಿದ ನಂತರ, ಅಮೆರಿಕ ಮತ್ತು ಕೆನಡಾಗಳಿಂದ ಬ್ರಿಟಿಷ್ ಸೈನ್ಯದಲ್ಲಿನ ಸಿಖ್ಖರ ಪಡೆಗಳು ಸ್ವದೇಶಕ್ಕೆ ಮರಳತೊಡಗಿದ್ದವು. ಈ ಪಡೆಗಳ ಮನವೊಲಿಸಿ ಬ್ರಿಟೀಷರ ವಿರುದ್ಧ ಸಿಡಿದೇಳುವಂತೆ ಮಾಡುವುದು ಗದರ್ ಚಳುವಳಿಯ ಪ್ರಮುಖ ರೂವಾರಿ ಹಾಗೂ ನಂತರ ಇಂಡಿಯನ್ ನ್ಯಾಶನಲ್ ಆರ್ಮಿಯನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅಪ್ರತಿಮ ಕ್ರಾಂತಿಕಾರಿ ರಾಸ್‌ಬಿಹಾರಿ ಬೋಸ್‌ರವರ ಯೋಜನೆಯಾಗಿತ್ತು. ಈ ಕಾರ್ಯಕ್ಕೆ ಶಚೀಂದ್ರರೇ ಸೂಕ್ತ ಎಂದರಿತ ರಾಸ್‌ಬಾಬು ಲುಧಿಯಾನಕ್ಕೆ ಶಚೀಂದ್ರರನ್ನು ಕಳುಹಿಸಿದರು. ದೇಶಕಾರ್ಯದಲ್ಲಿ ಶಚೀಂದ್ರರ ತೀವ್ರ ಆಸ್ಥೆ ಮತ್ತು ಸ್ವಾತಂತ್ರ್ಯಕ್ಕಾಗಿ ಅವರಲ್ಲಿದ್ದ ಅದಮ್ಯ ತುಡಿತವನ್ನು ಕಂಡ ಲಾಹೋರಿನ ಸಿಖ್ ರೆಜಿಮೆಂಟಿನ ಸೈನಿಕರು 21 ಫೆಬ್ರವರಿ 1915 ರಂದು ಸಶಸ್ತ್ರ ಕ್ರಾಂತಿಯನ್ನು ಪ್ರಾರಂಭಿಸಲು ನಿರ್ಧರಿಸಿದರು. ಕಾಶಿಯ ಒಂದು ಸಿಖ್ ರೆಜಿಮೆಂಟ್ ಸಹ ಈ ವಿಪ್ಲವದಲ್ಲಿ ಪಾಲ್ಗೊಳ್ಳುವ ಭರವಸೆ ನೀಡಿತು. ದುರ್ದೈವದಿಂದ ಈ ರಹಸ್ಯಯೋಜನೆ ವಿಫಲವಾಯಿತು. ಪರಿಣಾಮವಾಗಿ ಅನೇಕ ವೀರ ಸೈನಿಕರು ಬ್ರಿಟೀಷರ ಕೈಯಲ್ಲಿ ಬಂಧಿಗಳಾಗಿ ಅಸಹನೀಯ ಚಿತ್ರಹಿಂಸೆ ಅನುಭವಿಸಿದರು. ಅನೇಕರು ಫಿರಂಗಿಯ ಬಾಯಿಗೆ ಆಹಾರವಾದರು.

ಆದರೆ ಸ್ವಾತಂತ್ರ್ಯ ದೇವಿಯ ಪ್ರತಿಮೆಯನ್ನು ಮನದಲ್ಲಿ ದೃಢವಾಗಿ ನೆಟ್ಟಿದ್ದ ಶಚೀಂದ್ರರಿಗೆ ಇಂತಹ ಅಡೆತಡೆಗಳು ಕಟ್ಟಿಹಾಕಲು ಸಾಧ್ಯವಿರಲಿಲ್ಲ. ಅಂದಿನ ಬ್ರಿಟಿಷ್ ಸರ್ಕಾರದ ಗೃಹಸದಸ್ಯ ಸರ್ ರೆಜಿನಾಲ್ಡ್ ಸಿರೆಕ್‌ನ ಹತ್ಯೆಯ ಹೊಸಯೋಜನೆಯನ್ನು ಪೂರ್ತಿಗೊಳಿಸುವ ಜವಾಬ್ದಾರಿ ಶಚೀಂದ್ರರು ತಾವೇ ವಹಿಸಿಕೊಂಡು ದೆಹಲಿಗೆ ಹೊರಟರು. ಆದರೆ ದುರ್ದೈವ ಇಲ್ಲಿಯೂ ಅವರ ಬೆನ್ನುಹತ್ತಿಬಂದಿತ್ತು, ಈ ಕೆಲಸವೂ ಸಹ ವಿಫಲವಾಯಿತು. ರಾಸ್‌ಬಾಬು ಜಪಾನಿಗೆ ತೆರಳಿ ಅಲ್ಲಿಂದ ಕ್ರಾಂತಿಕಾರ್ಯವನ್ನು ಮುನ್ನಡೆಸುವ ಮಹತ್ವಾಕಾಂಕ್ಷೆಯ ಯೋಜನೆ ಸಿದ್ಧವಾಯಿತು. 12 ಮೇ 1915ರಂದು, ಗಿರಿಜಾ ಬಾಬು ಮತ್ತು ಶಚೀಂದ್ರರು ಅವರನ್ನು ಕಲ್ಕತ್ತೆಯ ಬಂದರಿನ ಮೂಲಕ ದೇಶದಿಂದ ಹೊರಹೋಗುವಂತೆ ನೋಡಿಕೊಂಡರು. ತದನಂತರ ಎರಡು–ಮೂರು ತಿಂಗಳ ನಂತರ ಕಾಶಿಗೆ ಮರಳಿದ ಶಚೀಂದ್ರರು ಬ್ರಿಟೀಷರಿಗೆ ಸಿಕ್ಕಿಬಿದ್ದರು. ಲಾಹೋರ್ ಪಿತೂರಿ ಪ್ರಕರಣದ ಭಾಗವಾಗಿ ಬನಾರಸ್ ಪಿತೂರಿ ಪ್ರಕರಣದಲ್ಲಿ ಶಚಿಂದ್ರರಿಗೆ ಆಜನ್ಮ ಕರಿನೀರ ಶಿಕ್ಷೆಯ ಬಕ್ಷೀಸು ಸಿಕ್ಕಿತು. ಯುದ್ಧಾನಂತರದ ಚಕ್ರಾಧಿಪತ್ಯದ ಘೋಷಣೆಯ ಪರಿಣಾಮವಾಗಿ ಅವರನ್ನು ಫೆಬ್ರವರಿ 1920ರಲ್ಲಿ ವಾರೀಂದ್ರ, ಉಪೇಂದ್ರ ಮತ್ತಿತರರೊಂದಿಗೆ ಬಿಡುಗಡೆಗೊಂಡರು.


1921–22 ರ ಸಮಯದಲ್ಲಿ ಕಾಂಗ್ರೆಸ್ಸಿನ ಸತ್ಯಾಗ್ರಹ ಚಳವಳಿಯ ಸಫಲತೆಗಾಗಿ ಒಂದು ವರ್ಷದ ಕಾಲ ಕ್ರಾಂತಿಕಾರಿ ಚಟುವಟಿಕೆಗಳನ್ನು ಸ್ಥಗಿತಗೊಳಿಸುವುದಾಗಿ ಗಾಂಧೀಜಿಗೆ ಕ್ರಾಂತಿಕಾರಿಗಳು ಭರವಸೆ ನೀಡಿದ್ದರು. ಆದರೆ ಚೌರಿಚೌರಾ ಘಟನೆಯ ನಂತರ ಗಾಂಧಿಜಿ ಸತ್ಯಾಗ್ರಹವನ್ನು ಹಠಾತ್ತಾಗಿ ಹಿಂತೆಗೆದುಕೊಂಡ ನಂತರ, ಶಚೀಂದ್ರರು ಮತ್ತೆ ಕ್ರಾಂತಿಕಾರಿ ಸಂಘಟನೆಯ ಕಾರ್ಯವನ್ನು ಪ್ರಾರಂಭಿಸಿದರು. 1923ರ ಆರಂಭದಲ್ಲಿ ರಾವಲ್ಪಿಂಡಿಯಿಂದ ದಾನಪುರದವರೆಗೆ 25 ಕೇಂದ್ರಗಳನ್ನು ಸ್ಥಾಪಿಸಿದರು. ಈ ಸಂದರ್ಭದಲ್ಲಿ, ಅವರ ಸಂಪರ್ಕಕ್ಕೆ ಲಾಹೋರಿನ ತಿಲಕ್ ಸ್ಕೂಲ್ ಆಫ್ ಪಾಲಿಟಿಕ್ಸ್‌ನ ಕೆಲ ವಿದ್ಯಾರ್ಥಿಗಳು ಬಂದರು. ಈ ವಿದ್ಯಾರ್ಥಿಗಳಲ್ಲಿಯೇ ಒಬ್ಬ ಸರ್ದಾರ್ ಭಗತ್ ಸಿಂಗ್. ಅದೇ ಸಮಯದಲ್ಲಿ, ಅವರು ಕಲ್ಕತ್ತಾದಲ್ಲಿ ಯತೀಂದ್ರ ದಾಸ್‌ನನ್ನು ಕ್ರಾಂತಿಕಾರ್ಯಕ್ಕೆ ಅಣಿಮಾಡಿದರು. ಇದೇ ಯತೀಂದ್ರ ಮುಂದೊಮ್ಮೆ ಲಾಹೋರ್ ಪಿತೂರಿ ಪ್ರಕರಣದಲ್ಲಿ ಬ್ರಿಟೀಷರಿಗೆ ಸಿಕ್ಕುಬಿದ್ದು ಜೈಲಿನಲ್ಲೇ ಉಪವಾಸ ಸತ್ಯಾಗ್ರಹ ಹೂಡಿ ಹಸಿವಿನಿಂದ ತನ್ನ ಜೀವವನ್ನು ತ್ಯಾಗ ಮಾಡುವವನಿದ್ದ. ಕೆಲವು ದಿನಗಳ ನಂತರ, ಅವರು ತಮ್ಮ ತಂಡಕ್ಕೆ "ಹಿಂದೂಸ್ಥಾನ್ ರಿಪಬ್ಲಿಕನ್ ಅಸೋಸಿಯೇಷನ್" ಎಂದು ನಾಮಕರಣ ಮಾಡಿದರು. ಅವರೇ ಈ ತಂಡಕ್ಕೊಂದು ಸಂವಿಧಾನವನ್ನೂ ಸಿದ್ಧಪಡಿಸಿ ಭಾರತೀಯರ ಸಂಘಟನೆ ಮತ್ತು ಸಶಸ್ತ್ರ ಕ್ರಾಂತಿಯ ಮೂಲಕ ಭಾರತೀಯ ಪ್ರಜಾಪ್ರಭುತ್ವ ಒಕ್ಕೂಟದ ಸ್ಥಾಪನೆಯ ಗುರಿಯನ್ನೂ ಕೊಟ್ಟರು. ಕ್ರಾಂತಿಕಾರಿಗಳ ರಹಸ್ಯ ಸಂಘಟನೆ ಮತ್ತು ಈ ಕಾರ್ಯಕ್ಕೆ ಬೇಕಾದ ಪೂರಕ ಸಾಹಿತ್ಯದ ಸೃಷ್ಟಿಗೆ ಗಮನ ಹರಿಸಿದರು.

ದ್ವಿತೀಯ ವಿಶ್ವ ಸಮರದ ಪ್ರಾರಂಭದಲ್ಲಿಯೇ ಅವರನ್ನು ಮತ್ತೆ ಬಂಧಿಸಿ ರಾಜಸ್ಥಾನಕ್ಕೆ ಕಳುಹಿಸಲಾಯಿತು. ಅಲ್ಲಿ ಕ್ಷಯರೋಗಕ್ಕೆ ಒಳಗಾಗಿದ್ದಾಗ ಚಿಕಿತ್ಸೆಗಾಗಿ ಬಿಡುಗಡೆಯಾಯಿತು. ಆದರೆ ರೋಗವು ತೀವ್ರವಾಗಿ ಉಲ್ಬಣಗೊಂಡು 1942ರ ಫೆಬ್ರುವರಿ 7ರಂದು ಶಚೀಂದ್ರನಾಥ ಸಾನ್ಯಾಲ್ ನಿಧನರಾದರು. ಕ್ರಾಂತಿಕಾರಿ ಚಳವಳಿಗೆ ಬೌದ್ಧಿಕ ನಾಯಕತ್ವವನ್ನು ಒದಗಿಸಿ ಅದಕ್ಕೊಂದು ನಿರ್ದಿಷ್ಟ ತಾತ್ವಿಕ ಸಿದ್ಧಾಂತವೊಂದನ್ನು ನೀಡಿದ ಶ್ರೇಯಸ್ಸು ಸಾನ್ಯಾಲರದ್ದು. 'ವಿಚಾರವಿನಿಮಯ್' ಎಂಬ ಅವರ ಪುಸ್ತಕದಲ್ಲಿ ತಮ್ಮ ತತ್ತ್ವಚಿಂತನೆಯ ದೃಷ್ಟಿಕೋನವನ್ನು ಸ್ವಲ್ಪಮಟ್ಟಿಗೆ ಪ್ರಸ್ತುತಪಡಿಸಿದರು. 'ಸಾಹಿತ್ಯ, ಸಮಾಜ ಮತ್ತು ಧರ್ಮ'ದಲ್ಲಿ ಅವರ ದಾರ್ಶನಿಕ ಮತ್ತು ಹಿಂದೂ ಧರ್ಮಾನುರಾಗದ ಪರಿಚಯವಾಗುತ್ತದೆ.

## ಪುಸ್ತಕದಿಂದ...

ಪ್ರಸಿದ್ಧ ಇತಿಹಾಸಕಾರ ಜದುನಾಥ ಸರಕಾರರು ಛತ್ರಪತಿ ಶಿವಾಜಿ ಮಹಾರಾಜರ ಜೀವನ ಸಾಧನೆಯನ್ನು ಸಂಕ್ಷೇಪವಾಗಿ ಹೀಗೆ ಹೇಳಿದ್ದಾರೆ:

"ಜಹಂಗೀರನು ಪ್ರಯಾಗದಲ್ಲಿಯ ಅಕ್ಷಯ ವಟವೃಕ್ಷವನ್ನು ಬುಡಮಟ್ಟ ಕಡಿಸಿಹಾಕಿದ. ಅದರ ಬೇರುಗಳ ಮೇಲೆ ಕುದಿಯುವ ಸೀಸ ಸುರಿಸಿದ. ಅವಿನಾಶಿ ಎಂದು ವಿಖ್ಯಾತವಾಗಿದ್ದ ಆ ವೃಕ್ಷ ಇನ್ನೂ ತಲೆಯೆತ್ತದಂತೆ ತಾನು ಸಂಪೂರ್ಣವಾಗಿ ನಾಶಗೊಳಿಸಿದುದಾಗಿ ಗರ್ವದಿಂದ ಘೋಷಿಸಿದ. ಆದರೆ ಮುಂದೆ ಏನಾಯಿತು? ಒಂದು ವರ್ಷದೊಳಗಾಗಿ ಸುಟ್ಟು ಬೂದಿಯಾದ ಬುಡದಿಂದಲೇ ಆ ವಟವೃಕ್ಷ ಮತ್ತೆ ಚಿಗುರೊಡೆಯಿತು. ಮೇಲೆ ಹೆಪ್ಪುಗಟ್ಟಿ ತನ್ನನ್ನು ಅದುಮಿಟ್ಟಿದ್ದ ಸೀಸದ ದುರ್ಭೇದ್ಯ ಪದರುಗಳನ್ನು ಅದು ಸೀಳಿ ದೂರ ತಳ್ಳಿ ತಲೆಯೆತ್ತಿ ಬೆಳೆಯಿತು. ಆ ಸೀಸದ ಪದರುಗಳಂತೆಯೇ, ದಾಸ್ಯದ ಶೃಂಖಲೆ ದಬ್ಬಾಳಿಕೆಗಳು ಹಿಂದುತ್ವದ ವಟವೃಕ್ಷವನ್ನು ನೂರಾರು ವರ್ಷಗಳವರೆಗೆ ಧ್ವಂಸಗೊಳಿಸಿ ಮೆಟ್ಟಿ ಕುಳಿತಿದ್ದವು.




ಆದರೆ ಆ ವಟವೃಕ್ಷವು ಪರರ ದಮನದ ಭಾರಕ್ಕೆ ಸಿಕ್ಕಿಯೂ ಸಾಯದೆ, ಮತ್ತೊಮ್ಮೆ ಚಿಗುರೊಡೆದು, ದಾಸ್ಯದ ಸೀಸಪದರುಗಳನ್ನು ದೂರಕ್ಕೊಗೆದು, ಎತ್ತರೆತ್ತರಕ್ಕೆ ಬೆಳೆದು ಗಗನಚುಂಬಿಯಾಗಿ ನಿಲ್ಲಬಲ್ಲದು, ಎಂಬುದನ್ನು ಶಿವಾಜಿಯು ತನ್ನ ಜೀವನದಿಂದ ಸಿದ್ಧಪಡಿಸಿ ತೋರಿಸಿದನು." ಈ ವಾಕ್ಯದ ಗರ್ಭಿತಾರ್ಥ ಪೂರ್ಣವಾಗಿ ಅರಿಯಬೇಕಾದರೆ ಅಂದಿನ ಸನ್ನಿವೇಶದ ಭೀಷಣ ಹಿನ್ನೆಲೆಯಲ್ಲಿ ಶ್ರೀ ಶಿವಾಜಿ ಮಹಾರಾಜರ ಅಸಾಧಾರಣ ಪ್ರತಿಭೆ–ಪೌರುಷಗಳು ಹೇಗೆ ಮಿಂಚಿದವೆಂಬುದನ್ನು ಕಣ್ಮುಂದೆ ತಂದುಕೊಳ್ಳಬೇಕಾಗುತ್ತದೆ.

ಪುಸ್ತಕದ ಹೆಸರು: **ಯುಗಾವತಾರ**

ವಿದೇಶೀ ಆಕ್ರಮಣಕಾರ ಮತಾಂಧರ ಹೊಡೆತಕ್ಕೆ ಸಿಕ್ಕಿ ನಲುಗಿದ್ದ ಸನಾತನ ಧರ್ಮದ ಕೇಸರಿ ಕೀರ್ತಿಪತಾಕೆಯನ್ನು ತನ್ನ ಅಸಾಧಾರಣ ಯುದ್ಧಕೌಶಲ, ಪ್ರತಿಭೆ–ಪೌರುಷಗಳಿಂದ, ದಿಗಂತದೆಡೆಗೆ ಎತ್ತಿಹಿಡಿದ, ಭಾರತೀಯರಿಗೆ 'ಹಿಂದವೀ ಸ್ವರಾಜ್ಯ'ದ ರಾಷ್ಟ್ರೀಯ ಧ್ಯೇಯಮಂತ್ರ ದೀಕ್ಷೆಯನ್ನು ನೀಡಿದ ಯುಗಪುರುಷ ಛತ್ರಪತಿ ಶಿವಾಜಿ ಮಹಾರಾಜರು. ಭಾರತದ ಎಲ್ಲೆಡೆ ಪಾರತಂತ್ರ್ಯದ ಬಿರುಗಾಳಿ ಭೀಕರವಾಗಿ ಬೀಸುತ್ತಿದ್ದ ಮೃತ್ಯುಸಂಕಟ ಸಮಯದಲ್ಲೂ ವಿವೇಕ, ತಾಳ್ಮೆ, ಎಚ್ಚರದಿಂದ ಸ್ವಾತಂತ್ರ್ಯದ ಪ್ರಾಚೀನ ಹಿಂದೂ ಜೀವನ ಜ್ಯೋತಿಯನ್ನು ನಂದಿಹೋಗದ ಹಾಗೆ ರಕ್ಷಿಸಿದ, ಶಿವಛತ್ರಪತಿಯ ಸುತ್ತ ಹೆಣೆದ ಇತಿಹಾಸದ ಘಟನಾವಳಿಗಳು ಈ ಗ್ರಂಥದಲ್ಲಿ ಕಥನ ಶೈಲಿಯಲ್ಲಿ ಮೂಡಿಬಂದಿದೆ.

**ಲೇಖಕರು: ಹೊ ವೆ ಶೇಶಾದ್ರಿ, ಪ್ರಕಾಶಕರು: ರಾಷ್ಟ್ರೋತ್ಥಾನ ಸಾಹಿತ್ಯ**

## ಎಲ್ಲೋ ಕೇಳಿದ ಕಥೆ

ದೀನರನ್ನೂ, ದುಃಖಿಗಳನ್ನೂ ಕಂಡರೆ ಪರಮಹಂಸ ಶ್ರೀರಾಮಕೃಷ್ಣರ ಸಂತಾಪ ಮಿತಿಮೀರುತ್ತಿತ್ತು. ಶುಷ್ಕ ವೇದಾಂತಿಯಂತೆ ಅಥವಾ ಹೊಟ್ಟೆ ತುಂಬಿದ ಪಂಡಿತನಂತೆ ಎಲ್ಲವೂ ಮಾಯೆ ಎಂದು ಅವರು ಸುಮ್ಮನಾಗುತ್ತಿರಲಿಲ್ಲ. ಒಂದು ಸಾರಿ ಅವರ ಶಿಷ್ಯ ಮಥುರಾ ದಾಸನು ತನ್ನ ಜಮೀನ್ದಾರನ ಪರವಾಗಿ ಕಂದಾಯ ವಸೂಲಿ ಮಾಡುವ ಸಂದರ್ಭದಲ್ಲಿ ರಾಮಕೃಷ್ಣರನ್ನೂ ಜೊತೆಯಲ್ಲಿ ಕರೆದೊಯ್ದನು. ಆ ವರ್ಷ ಮಳೆಯಾಗದೆ ಬೆಳೆ ಸರಿಯಾಗಿ ಬಂದಿರಲಿಲ್ಲ. ರೈತರು ಬಹಳ ಕಷ್ಟದಲ್ಲಿದ್ದರು. ಅದನ್ನು ಕಂಡು ಶ್ರೀರಾಮಕೃಷ್ಣರು ಕಂದಾಯವನ್ನು ಬಿಟ್ಟು ಬಿಡುವಂತೆಯೂ, ಅವರೆಲ್ಲರಿಗೂ ಧನಧಾನ್ಯಗಳನ್ನು ಹಂಚುವಂತೆಯೂ, ಒಂದು ಸಮಾರಾಧನೆ ಮಾಡಿಸಿ ಅವರನ್ನು ಉಪಚರಿಸುವಂತೆಯೂ ಮಥುರಾನಿಗೆ ತಿಳಿಸಿದರು. ಮಥುರಾದಾಸ ರಾಮಕೃಷ್ಣರ ಮಾತಿಗೆ ಒಪ್ಪಲಿಲ್ಲ. ಆಗ ಕೋಪಗೊಂಡ ರಾಮಕೃಷ್ಣರು ಅವನಿಗೆ – "ಹಾಗೆಂದರೇನು? ಈ ಭೂಮಿ ನಿನ್ನದೇನು? ನೀನು ದುಡಿದದ್ದೇನು? ಅವರಲ್ಲವೆ ಗೇಯುವವರು? ನೀನು ಬರಿಯ ಜಗನ್ಮಾತೆಯ ಮೇಸ್ತ್ರಿ! ಆಕೆಯ ಒಕ್ಕಲು! ಆಕೆಯ ಮಕ್ಕಳು ಗೋಳಾಡುತ್ತಿದ್ದಾರೆ! ನಿನಗೆ ಒಲ್ಲೆ ಎನ್ನಲು ಹೇಗೆ ಮನಸ್ಸು ಬರುತ್ತದೆ? ನೀನು ಮಾಡಲೇಬೇಕು" ಎಂದು ಗದರಿದರು. ರಾಮಕೃಷ್ಣರ ಮಾತಿನಿಂದ ಮಥುರಾ ದಾಸನ ಕಣ್ತೆರೆಯಿತು. ಆತ ಪರಮಹಂಸರ ಮಾತಿನಂತೆಯೇ ಕಂದಾಯವನ್ನು ಮಾಫಿ ಮಾಡಿದ್ದಲ್ಲದೇ ಬರಗಾಲಪೀಡಿತ ರೈತವರ್ಗದ ಜನರಿಗೆ ಧವಸಧಾನ್ಯಗಳನ್ನು ಹಂಚಿದನು.

ಅಧ್ಯಾತ್ಮದ ಮೇರುಶಿಖರವಾಗಿದ್ದ ರಾಮಕೃಷ್ಣ ಪರಮಹಂಸರು ಪ್ರಾಪಂಚಿಕ ಜೀವನದ ಜಂಝುಡಗಳಿಂದ ದೂರವಿದ್ದರೂ ಸಾಮಾನ್ಯ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಸಂವೇದನೆ ಉಳ್ಳವರಾಗಿದ್ದರು. ಇದೇ ಸಂತರ ಲಕ್ಷಣ.



**ಹೆಸರು :** ಬೆಲಾಹಿ (ಮೋರ್ನಿ, ದೇಸಿ ಎನ್ನುವ ಹೆಸರಿನಿಂದಲೂ ಕರೆಯಲಾಗುತ್ತದೆ)

**ಮೂಲ :** ಹರಿಯಾಣ ರಾಜ್ಯದ ಪಂಚ್ಕುಲಾ, ಅಂಬಾಲಾ, ಯಮುನಾನಗರ ಜಿಲ್ಲೆಗಳಲ್ಲಿ ಹಾಗೂ ಚಂಡೀಗಢ್‌ನಲ್ಲಿ ಕಂಡುಬರುತ್ತದೆ.

**ವಿಶೇಷತೆ:** ಇದು ಒಂದು ಉಭಯೋಪಯೋಗಿ ತಳಿಯಾಗಿದೆ. ಮಧ್ಯಮ ಗಾತ್ರದ ದೇಹದ ಈ ತಳಿಯ ದನಗಳು ಕೆಂಪುವಿಶ್ರಿತ ಕಂದು ಬಣ್ಣದ ಮೇಲೆ ಬಿಳಿಯ ಪಟ್ಟೆಗಳನ್ನು ಹೊಂದಿರುತ್ತವೆ. ಮುಖ ಬಹುತೇಕ ಬಿಳಿಯ ಬಣ್ಣದಲ್ಲಿರುತ್ತದೆ. ಗುಜ್ಜರ ಸಮುಮದಾಯದ ಲಂಗಾರಿಯಾ ಬುಡಕಟ್ಟಿನ ಜನರು ಈ ತಳಿಯ ದನಗಳನ್ನು ತಲೆತಲಾಂತರದಿಂದ ಸಾಕುತ್ತ ಬಂದಿದ್ದಾರೆ.

**ಹಾಲಿನ ಪ್ರಮಾಣ:** ಉತ್ತಮ ಹಾಲಿನ ಗುಣಮಟ್ಟ ಹೊಂದಿವೆ, ಪ್ರತಿದಿನ 3.5 ಲೀಟರ್‌ವರೆಗೆ ಹಾಲು ನೀಡಬಲ್ಲವು. ಒಂದು ಕರಾವಿನಲ್ಲಿ ಸರಾಸರಿ 1000 ಲೀಟರ್, ಗರಿಷ್ಟ 2000 ಲೀಟರ್‌ವರೆಗೂ ಹಾಲು ನೀಡಬಲ್ಲವು. ಹಾಲಿನಲ್ಲಿ ಸರಾಸರಿ ಶೇ. 5.25 ಕೊಬ್ಬಿನಂಶವಿರುತ್ತದೆ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀನಿವಾಸ ಹೆಗಡೆ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್, ಸತ್ಯಾನಾರಾಯಣ ಶಾನಭಾಗ್



ಉತ್ತರಪ್ರದೇಶದ ಮಥುರಾದ ದೇವಸ್ಥಾನವೊಂದರಲ್ಲಿ ಚಪ್ಪಲಿ ಕಾಯುವ ಕೆಲಸ ಮಾಡುತ್ತಿದ್ದ 70 ವರ್ಷದ ವೃದ್ಧೆ ಫೂಲವತಿ ತನ್ನ ಜೀವಿತಾವಧಿಯಲ್ಲಿ ಸಂಗ್ರಹಿಸಿದ 40 ಲಕ್ಷ ರೂ. ಹಣವನ್ನು ಮಥುರೆಯ ವೃಂದಾವನದಲ್ಲಿ ಗೋಶಾಲೆ ಮತ್ತು ಧರ್ಮಶಾಲೆ ನಿರ್ಮಾಣಕ್ಕೆ ದಾನ ಮಾಡಿದ್ದಾರೆ. ತನಗಿದ್ದ ಒಂದಿಷ್ಟು ಜಮೀನನ್ನು ಮಾರಿದ ಹಣದ ಜೊತೆಗೆ ಚಪ್ಪಲಿ ಕಾಯುವ ಕೆಲಸದಿಂದ ಗಳಿಸಿದ ಹಣವನ್ನು ಸೇರಿಸಿ ದಾನಮಾಡಿದ ಫೂಲವತಿ "ಗೋವುಗಳಿಗೆ ಆಶ್ರಯ ಒದಗಿಸುವುದೇ ಶ್ರೀಕೃಷ್ಣನ ಸೇವೆ" ಎನ್ನುತ್ತಾರೆ.

**ಪ್ರವಾಸೋದ್ಯಮ ದೇಶದಲ್ಲಿ ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರವಾಗಿದೆ. ಕಳೆದ 2017ರಲ್ಲಿ ಭಾರತಕ್ಕೆ ಆಗಮಿಸಿದ ವಿದೇಶಿ ಪ್ರವಾಸಿಗರ ಸಂಖ್ಯೆ ಮೊದಲಬಾರಿಗೆ ಹತ್ತು ಲಕ್ಷ ದಾಟಿದ್ದು ಪ್ರವಾಸೋದ್ಯಮದ ಆದಾಯ ರೂ 1.75ಲಕ್ಷ ಕೋಟಿಗಳಷ್ಟು ಎಂದು ಸರ್ಕಾರಿ ಅಂಕಿಅಂಶಗಳಿಂದ ತಿಳಿದುಬಂದಿದೆ. ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲಿ ಶೇ. 15.2ರಷ್ಟು ಪ್ರಗತಿ ಕಂಡಿದೆ. ಇರುವ ಗ್ರಾಮೀಣ ಪ್ರದೇಶಗಳ ಆರ್ಥಿಕಾಭಿವೃದ್ಧಿಯಲ್ಲಿ ಪ್ರವಾಸೋದ್ಯಮ ಪ್ರಮುಖ ಪಾತ್ರವಹಿಸಬಲ್ಲದ್ದಾಗಿದೆ.**



ವಾಯುಮಾಲಿನ್ಯ ವಿಪರೀತವಾಗಿರುವ ಅನೇಕ ನಗರಗಳಲ್ಲಿ ಶ್ವಾಸಕೋಶ ಸಂಬಂಧಿ ಕಾಯಿಲೆಗಳು ಸಾಮಾನ್ಯವಾಗಿರುವಂತೆ ಮನೆಯಿಂದ ಹೊರಗೆ ಹೊರಡುವುದು ದುಸ್ತರವಾಗಿರುವ ಸ್ಥಿತಿಯಿದೆ. ಇಂತಹ ವಿಷಮ ಪರಿಸ್ಥಿತಿಯಿಂದ ಪಾರಾಗಲು ನಾನೋ ಕ್ಲೀನ್ ಗ್ಲೋಬಲ್ ಸಂಸ್ಥೆಯು ದೆಹಲಿಯ ಐ.ಐ.ಟಿ. ವಿಜ್ಞಾನಿಗಳ ಜೊತೆಗೂಡಿ ಮೂಗಿನ ಹೊಳ್ಳೆಗಳಲ್ಲಿ ಸುಲಭವಾಗಿ ಅಳವಡಿಸಬಹುದಾದ ನ್ಯಾಸೋಫಿಲ್ಟರ್ ಹೆಸರಿನ ಗಾಳಿಶೋಧಕ ಪರಿಕರವೊಂದನ್ನು ಸಿದ್ದಪಡಿಸಿದೆ. ಇದು ಗಾಳಿಯಲ್ಲಿರುವ 2.5 ರಿಂದ 9 ಪಿ.ಎಂ(ಪಾರ್ಟಿಕಲ್ ಮ್ಯಾಟರ್) ತನಕದ ಅಪಾಯಕಾರಿ ಕಣಗಳನ್ನು ಶೋಧಿಸಿ ಸೇವಿಸುವ ಗಾಳಿಯನ್ನು ಶುದ್ಧಗೊಳಿಸುತ್ತದೆ. ಕೇವಲ 10 ರೂಪಾಯಿಗೆ ಲಭ್ಯವಿರುವ ಈ ನಾಸೋಫಿಲ್ಟರ್, ಸ್ವಚ್ಛ ಭಾರತದ ಪರಿಕಲ್ಪನೆಗೆ ಪೂರಕವೆನಿಸುವ ಕಡಿಮೆ ಬೆಲೆಯಲ್ಲಿ ಲಭ್ಯವಿರುವ ನೂತನ ಅನ್ವೇಷಣೆ ಅನಿಸಿಕೊಂಡಿದೆ. 2017ರ ಸ್ಟಾರ್ಟ್ ಅಪ್ ನ್ಯಾಷನಲ್ ಪ್ರಶಸ್ತಿ ಪುರಸ್ಕೃತ ಈ ಅನ್ವೇಷಣೆ, ದಕ್ಷಿಣ ಕೊರಿಯಾ ಸರಕಾರದ "ಜಗತ್ತಿನ 50 ಉತ್ಕೃಷ್ಟ ತಾಂತ್ರಿಕ ಸ್ಟಾರ್ಟ್ ಅಪ್"ಗಳಲ್ಲಿ ಒಂದು ಎಂದೂ ಕೂಡಾ ಗುರುತಿಸಿಕೊಂಡಿದೆ.

**ದೇಶದೆಲ್ಲೆಡೆ ಅಣಬೆಗಳಂತೆ ತಲೆ ಎತ್ತುತ್ತಿರುವ ಮದರಸಾಗಳು ಎಲ್ಲಿಯೂ ಡಾಕ್ಟರ್ ಅಥವಾ ಇಂಜಿನೀಯರ್‌ಗಳನ್ನು ಸೃಷ್ಟಿಸಿಲ್ಲ ಬದಲಾಗಿ ಭಯೋತ್ಪಾಕದರನ್ನು ಮಾತ್ರ ಹುಟ್ಟುಹಾಕಿವೆ ಮತ್ತು**



**ಮದರಸಾಗಳಿಂದ ಹೊರಬರುವ ಯುವಕಯುವತಿಯರು ನಿರುದ್ಯೋಗಿಗಳೇ ಆಗಿದ್ದಾರೆ. ಹಾಗಾಗಿ ದೇಶದಲ್ಲಿರುವ ಎಲ್ಲಾ ಮದರಸಾಗಳನ್ನು ದಯವಿಟ್ಟು ಮುಚ್ಚಿಸಿ ಎಂದು ಕೇಂದ್ರ ಶಿಯಾ ವಕ್ಫ್ ಮಂಡಳಿಯ ಮುಖ್ಯಸ್ಥ ವಸಿಮ್ ರಿಝ್ವಿ ಅವರು ಪ್ರಧಾನಮಂತ್ರಿ ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ನಿವೇದಿಸಿದ್ದಾರೆ. ಅನೇಕ ಮದರಸಾಗಳು ಬಾಂಗ್ಲಾದೇಶ ಹಾಗೂ ಪಾಕಿಸ್ತಾನದಿಂದ ಹರಿದು ಬರುವ ಹಣದಿಂದ ನಡೆಯುತ್ತಿದ್ದು ಅಲ್ಲಿನ ಭಯೋತ್ಪಾದಕ ಸಂಘಟನೆಗಳು ಇದಕ್ಕೆ ಸಹಾಯ ಮಾಡುತ್ತಿವೆ ಎಂದು ಅವರು ಆರೋಪಿಸಿದ್ದಾರೆ. ಪ್ರಸ್ತುತ ಜಗತ್ತಿನಲ್ಲಿ ಉಪಯೋಗಕ್ಕೆ ಬರುವ ಯಾವುದೇ ಶಿಕ್ಷಣವನ್ನು ಮದರಸಾಗಳು ನೀಡುತ್ತಿಲ್ಲ ಹಾಗಾಗಿ ಎಲ್ಲಾ ಮದರಸಾಗಳನ್ನು ಸಿ.ಬಿ.ಎಸ್.ಸಿ ಅಥವಾ ಐ.ಸಿ.ಎಸ್.ಸಿ ವ್ಯವಸ್ಥೆ ಒಳಗೆ ತರಬೇಕು ಮತ್ತು ಎಲ್ಲಾ ಮುಸ್ಲಿಮೇತರ ವಿದ್ಯಾರ್ಥಿಗಳಿಗೂ ಇಲ್ಲಿ ಕಲಿಯಲು ಅವಕಾಶ ನೀಡಬೇಕು ಎಂದು ಸಲಹೆ ನೀಡಿದ್ದಾರೆ. ಇತ್ತೀಚೆಗಷ್ಟೇ ಉತ್ತರಾಖಂಡ ಸರ್ಕಾರವು ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಧಾನಮಂತ್ರಿಗಳ ಭಾವಚಿತ್ರ ಇರಿಸಬೇಕೆಂಬ ಆದೇಶಕ್ಕೆ ಮದರಸಾಗಳು ಇದು ಇಸ್ಲಾಮಿಗೆ ವಿರುದ್ಧ ಎಂದು ಆಕ್ಷೇಪ ವ್ಯಕ್ತಪಡಿಸಿದ್ದವು. ಇನ್ನೊಂದೆಡೆ ಉತ್ತರಪ್ರದೇಶದಲ್ಲಿ ಪೋಲೀಸರು ಮದರಸಾ ಒಂದರ**

## ಸಾಲುದ್ದದ ಸುದ್ದಿಗಳು

**ಮೇಲೆ ದಾಳಿ ನಡೆಸಿ ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದ 51 ಹೆಣ್ಣು ಮಕ್ಕಳನ್ನು ರಕ್ಷಿಸಿದ್ದನ್ನು ಸ್ಮರಿಸಿಬಹುದು. ಈ ಬಗ್ಗೆ ಮಾತನಾಡಿದ ಉ.ಪ್ರ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ಇಸ್ಲಾಮಿಕ್ ಶಿಕ್ಷಣವನ್ನು ನೀಡುವ ಮದರಸಾಗಳನ್ನು ಆಧುನೀಕರಣಗೊಳಿಸುವ ಆವಶ್ಯಕತೆಯಿದೆ, ಅವುಗಳನ್ನು ಮುಚ್ಚುವುದು ಸಮಸ್ಯೆಗಳಿಗೆ ಪರಿಹಾರವಲ್ಲ ಎಂದು ಹೇಳಿದ್ದಾರೆ.**

ಪ್ರಸಿದ್ಧ ತಂಪುಪಾನೀಯ ಬ್ರಾಂಡ್‌ಗಳಾದ ಕೋಕೋ–ಕೋಲಾ ಮತ್ತು ಪೆಪ್ಸಿಗಳು ತಯಾರಿಸುವ ವಿವಿಧ ತಂಪುಪಾನೀಯಗಳಲ್ಲಿ ಕೀಟನಾಶಕದ ಪ್ರಮಾಣ ಭಾರತೀಯ ಭಾರತೀಯ ಮಾನದಂಡಗಳ ಬ್ಯೂರೋ (Bureau of Indian Standards) ನಿಗದಿಗೊಳಿಸಿದ ಮಾನದಂಡಕ್ಕಿಂತ ಸರಾಸರಿ 24 ಪಟ್ಟು ಹೆಚ್ಚಿದೆ ಎಂದು ಸೆಂಟರ್ ಫಾರ್ ಸೈನ್ಸ್ ಎಂಡ್ ಎನ್ವಿರಾನ್‌ಮೆಂಟ್(ಸಿಎಸ್‌ಸಿ) ಸಂಸ್ಥೆ ನಡೆಸಿದ




ಅಧ್ಯಯನದಿಂದ ಕಂಡುಬಂದಿದೆ. ಈ ಎರಡು ಕಂಪನಿಗಳ ಹನ್ನೊಂದು ಬೇರೆ ಬೇರೆ ತಂಪುಪಾನೀಯ ಬ್ರಾಂಡ್‌ಗಳ ಮಾದರಿಗಳನ್ನು ಹನ್ನೆರಡು ರಾಜ್ಯಗಳಿಂದ ಸಂಗ್ರಹಿಸಿ ನಡೆಸಿದ ಅಧ್ಯಯನದಲ್ಲಿ ಕ್ಯಾನ್ಸರ್‌ಕಾರಕ ಲಿಂಡೇನ್ ನಿಷೇಧಿತ ಕೀಟನಾಶಕ ಹೆಪ್ಟಾಕ್ಲಾರ್, ನ್ಯೂರೋಟಾಕ್ಸಿನ್ ಮೊದಲಾದವುಗಳು ನಿಗದಿತ ಪ್ರಮಾಣಕ್ಕಿಂತ ತುಂಬಾ ಹೆಚ್ಚಿನ ಪ್ರಮಾಣದಲ್ಲಿ ಇರುವುದು ಕಾಣಿಸಿದೆ. ಕೋಕೋಕೋಲಾದ ಕೋಲ್ಕತ್ತದಿಂದ ಸಂಗ್ರಹಿಸಿದ ಮಾದರಿಯಲ್ಲಿ 140 ಪಟ್ಟು ಲಿಂಡೇನ್ ಇದ್ದರೆ, ಥಾಣಾದ ಮಾದರಿಯಲ್ಲಿ 200 ಪಟ್ಟು ನ್ಯೂರೋಟಾಕ್ಸಿನ್ ಪತ್ತೆಯಾಗಿದೆ. ಶೇ. 71 ತಂಪುಪಾನೀಯಗಳಲ್ಲಿ ನಿಷೇಧಿತ ಹೆಪ್ಟಾಕ್ಲಾರ್ ಕೀಟನಾಶಕ ಕಂಡುಬಂದಿದೆ. 2003ರಲ್ಲಿ ಮೊದಲಬಾರಿಗೆ ತಂಪುಪಾನೀಯಗಳಲ್ಲಿ ಕೀಟನಾಶಕವಿರುವುದು ವರದಿಯಾಗಿ ಸದನದ ಜಂಟಿ ಸಮಿತಿಯ ವರದಿಯನ್ವಯ ಮಾನದಂಡ ನಿಗದಿಗೊಳಿಸಲಾಗಿದ್ದರೂ ಯಾವುದೇ ಪರಿಣಾಮ ಕಂಡುಬಂದಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಜನಪ್ರಿಯ ತಂಪುಪಾನೀಯಗಳಾದ ಕೋಕ್, ಪೆಪ್ಸಿ, ಮಾಜಾ, ಸ್ಪ್ರೈಟ್, ಥಂಬ್ಸಪ್, ಫಾಂಟಾ. ಪ್ರೂಟಿ ಮೊದಲಾದವು ಸೇವಿಸಲು ಅಸುರಕ್ಷಿತ ಮತ್ತು ಅನಾರೋಗ್ಯಕರ.



**ದೇಶದ ಮೊದಲ ಮಹಿಳಾ ರಕ್ಷಣಾ ಸಚಿವೆ ಎಂಬ ಹೆಗ್ಗಳಿಕೆಯ ಜೊತೆಗೆ ಸುಖೋಯ್–30 ಯುದ್ಧವಿಮಾನದಲ್ಲಿ ಹಾರಾಟ ನಡೆಸಿದ ಎರಡನೇ ನಾಯಕಿ ಎಂಬ ಗರಿಮೆಯನ್ನು ನಿರ್ಮಲಾ ಸೀತಾರಾಮನ್ ಮುಡಿಗೇರಿಸಿಕೊಂಡಿದ್ದಾರೆ. ಬುಧವಾರ ರಾಜಸ್ಥಾನದ ಜೋಧ್‌ಪುರದಲ್ಲಿರುವ ವಾಯುನೆಲೆಯಲ್ಲಿ ಅವರು 45 ನಿಮಿಷ ಸುಖೋಯ್‌ನಲ್ಲಿ ಹಾರಾಡಿದರು. ಪ್ರತಿ ಗಂಟೆಗೆ 2100 ಕಿ.ಮೀ. ವೇಗದಲ್ಲಿ ಹಾರಿದ ಯುದ್ಧವಿಮಾನ ಪ್ರಯಾಣದ ಬಗ್ಗೆ ಸಚಿವೆ 'ವಾಯುಪಡೆಗೆ ಧನ್ಯವಾದ. ರಕ್ಷಣಾ ಪಡೆಯಲ್ಲಿ ಎಷ್ಟು ಚುರುಕಾಗಿರಬೇಕು ಎಂಬುದನ್ನು ತಿಳಿದೆ' ಎಂದು ಅನುಭವ ಹಂಚಿಕೊಂಡಿದ್ದಾರೆ. 2009ರಲ್ಲಿ ಮಾಜಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಸುಖೋಯ್‌ನಲ್ಲಿ ಹಾರಾಟ ನಡೆಸಿದ್ದರು. ರಷ್ಯಾ ನಿರ್ಮಿತ ಯುದ್ಧವಿಮಾನ ಏರಿದ ಮೊದಲ ಮಹಿಳೆ ಮತ್ತು ಹಿರಿಯ ವಯಸ್ಸಿನ ವ್ಯಕ್ತಿ ಎಂಬ ಶ್ರೇಯ ಅವರ ಹೆಸರಲ್ಲಿದೆ.**




ಗಡಿಕಾಯುವ ಸೈನಿಕರ ಪತ್ನಿ, ಮಕ್ಕಳು ಮತ್ತು ಅವಲಂಬಿತರ ಕ್ಷೇಮಾಭಿವೃದ್ಧಿಗಾಗಿ ಯೋಧರುಗಳ ಪತ್ನಿಯರೇ ಸೇರಿ ಸ್ಥಾಪಿಸಿರುವ ಸ್ವಯಂಸೇವಾ ಸಂಸ್ಥೆ ಅರ್ಮಿ ವೈವ್ಸ್ ಅಸೋಷಿಯೇಶನ್ (AWWA) ಸೇನಾ ಜಲ್ ಹೆಸರಿನ ಬಾಟಲಿ ನೀರನ್ನು ಬಿಡುಗಡೆಮಾಡಿದ್ದು ಅದರಿಂದ ಬಂದ ಲಾಭಾಂಶವನ್ನು ಸೈನಿಕರು ಮತ್ತು ಸೈನಿಕ ವಿಧವೆಯರ ಕಲ್ಯಾಣಕ್ಕಾಗಿ ಬಳಸಲಾಗುವುದು ಎಂದು ಹೇಳಿದೆ. ಸದ್ಯ ಉತ್ತರಭಾರತದ ಹರಿಯಾಣ, ಪಂಜಾಬ್, ಉತ್ತರಾಖಂಡ ಮೊದಲಾದ ರಾಜ್ಯಗಳಲ್ಲಿ ಈ ನೀರಿನ ಬಾಟಲ್‌ಗಳು 6 ಮತ್ತು 10 ರೂ.ಗಳಲ್ಲಿ ಲಭ್ಯವಾಗಲಿವೆ. ಇದೆ ಅಲ್ಲದೇ ಈ ಸ್ವಯಂಸೇವಾ ಸಂಸ್ಥೆಯು ಕರ್ಟನ್, ಬೆಡ್‌ಶೀಟ್‌ಗಳು, ಕೈಚೀಲ, ಕರವಸ್ತ್ರ ಮೊದಲಾದ ಅನೇಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದು ಇವೆಲ್ಲದರಿಂದ ಬಂದ ಲಾಭಾಂಶ ಸೈನಿಕರ ಕುಟುಂಬಗಳ ಕ್ಷೇಮಾಭಿವೃದ್ಧಿಗೆ ಬಳಕೆ ಮಾಡುತ್ತಿದೆ.



**ಅಂತರಿಕ್ಷದಲ್ಲಿ ಅನೇಕ ವಿಕ್ರಮಗಳನ್ನು ತನ್ನದಾಗಿಸಿಕೊಂಡಿರುವ ಭಾರತೀಯ ಬಾಹ್ಯಾಕಾಶ ಸಂಸ್ಥೆ – ಇಸ್ರೋ ಇತ್ತೀಚೆಗೆ ಉಡಾವಣೆ ಮಾಡಿದ ಪಿಎಸ್‌ಎಲ್‌ವಿ ಸಿ40 ಮಿಶನ್ನಿನಲ್ಲಿ ಕಾರ್ಟೋಸ್ಯಾಟ್–2 ಉಪಗ್ರಹವನ್ನು ಕಕ್ಷೆಗೆ ಸೇರಿಸುವುದರ ಮೂಲಕ ತನ್ನ 100ನೇ ಉಪಗ್ರಹವನ್ನು ಉಡಾವಣೆ ಮಾಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಳೆದ ವರ್ಷ ಒಂದೇ ಉಡಾವಣೆಯಲ್ಲಿ 104 ಉಪಗ್ರಹಗಳನ್ನು ಕಕ್ಷೆಗೆ ಸೇರಿಸಿದ್ದ ಇಸ್ರೋ ಪಿಎಸ್‌ಎಲ್‌ವಿ ಸಿ40ಯಲ್ಲಿ ಹವಾಮಾನ ವೀಕ್ಷಣಾ ಉಪಗ್ರಹ ಕಾರ್ಟೋಸ್ಯಾಟ್ ಸೇರಿದಂತೆ 31 ಉಪಗ್ರಹಗಳನ್ನು ಹೊತ್ತೊಯ್ದಿತ್ತು. 1969ರಲ್ಲಿ ಆರಂಭವಾದ ಇಸ್ರೋ 1975ರಲ್ಲಿ ಆರ್ಯಭಟ ಹೆಸರಿನ ಮೊದಲ ಉಪಗ್ರಹವನ್ನು ಸೋವಿಯತ್ ರಷ್ಯಾದ ಸಹಯೋಗದಲ್ಲಿ ಉಡಾವಣೆ ಮಾಡಿತ್ತು. 1979ರ ರೋಹಿಣಿ ಉಪಗ್ರಹ ಶ್ರೀಹರಿಕೋಟದ ಸತೀಶ್ ಧವನ್ ಉಡಾವಣಾ ಕೇಂದ್ರದಿಂದ ಉಡಾವಣೆಯಾದ ಮೊದಲ ಉಪಗ್ರಹವಾಗಿದೆ.**

## ದೇಸೀ ಗೋ ತುಪ್ಪದ ಉತ್ಪಾದನೆ, ಒಂದು ತೃಪ್ತಿಕರ ಉದ್ಯಮ




ಭಾರತೀಯ ಗೋತಳಿಯ ಹಾಲಿಗೆ ಬೇಡಿಕೆ ಹೆಚ್ಚುತ್ತಿರುವ ನಡುವೆ ತುಪ್ಪ ಮಾಡಿ ಮಾರುವುದೂ ಆರ್ಥಿಕವಾಗಿ ಲಾಭದಾಯಕ ಎಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಇಂಗಳಿ ಗ್ರಾಮದ ಸಂದೇಶ ಖೋತ್ ಮತ್ತು ವಿನಾಯಕ ಖೋತ್ ಸಹೋದರರು ತೋರಿಸಿದ್ದಾರೆ. ಇವರು ದೇಸೀ ಗೋ ಸಾಕಣೆ ಮಾಡಿ, ತುಪ್ಪ ತಯಾರಿಸಿ ತಿಂಗಳಿಗೆ ಸುಮಾರು 90 ಸಾವಿರ ರೂ. ಲಾಭ ಗಳಿಸುತ್ತಿದ್ದಾರೆ.

ಸಂದೇಶ ಅಗ್ರಿಕಲ್ಚರ್ ಕೋರ್ಸ್ ಮಾಡಿ ಸಕ್ಕರೆ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ವಿನಾಯಕ ಬಿಕಾಂ ಪದವಿ ಪಡೆದಿದ್ದು ಖಾಸಗಿ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಸುಮಾರು ಹದಿನೆಂಟು ಎಕರೆ ನೀರಾವರಿ ಭೂಮಿ ಹೊಂದಿರುವ ಸಂದೇಶ ಮತ್ತು ವಿನಾಯಕ ಖೋತ್ ಕೃಷಿ ಮಾಡಲು ನಿಶ್ಚಯಿಸಿ ಇಬ್ಬರೂ ಕೆಲಸಕ್ಕೆ ರಾಜೀನಾಮೆ ನೀಡಿದರು. ನಂತರ ಗೋ ಸಾಕಣೆ ಬಗ್ಗೆ ಆಸಕ್ತಿ ಬೆಳೆಸಿಕೊಂಡು ಗುಜರಾತಿನಿಂದ ಗೀರ್ ತಳಿಯ ಆರು ಆಕಳುಗಳನ್ನು ತಲಾ 60 ಸಾವಿರ ರೂ.ಗೆ ಖರೀದಿಸಿ ತಂದರು. ಇವುಗಳಿಗೆ ಮೇವಿನ ಕೊರತೆ ಬಾರದಂತೆ ಸುಮಾರು ಎರಡು ಎಕರೆ ಜಮೀನಿನಲ್ಲಿ ಮೇವು ಬೆಳೆಸಿದರು.

ಇವರು ಆರು ಆಕಳುಗಳಿಂದ ಪ್ರತಿದಿನ 60 ಲೀಟರ್ ಹಾಲು ಹಿಂಡುತ್ತಾರೆ. ಹಾಲನ್ನು ಕೂಡ ಮಾರಾಟ ಮಾಡುತ್ತಾರೆ. ಒಂದಿಷ್ಟು ಹಾಲಿನಿಂದ ಮೊಸರು ಮಾಡಿ ಪ್ರತಿದಿನ 2 ಕೆಜಿ ತುಪ್ಪ ತಯಾರಿಸುತ್ತಾರೆ. ಸದ್ಯ ಮಾರುಕಟ್ಟೆಯಲ್ಲಿ ಕೆಜಿ ತುಪ್ಪಕ್ಕೆ 2000 ರೂ. ದರವಿದೆ. ಸಾಮಾನ್ಯ ತುಪ್ಪಕ್ಕೆ ಮಾರುಕಟ್ಟೆಯಲ್ಲಿ ಕೆಜಿಗೆ 600–800 ರೂ. ಇದ್ದರೆ ದೇಸೀ ಹಸುವಿನ ತುಪ್ಪಕ್ಕೆ ಹೆಚ್ಚು ದರವಿದೆ. ತಿಂಗಳಲ್ಲಿ 60 ಕೆಜಿ ತುಪ್ಪ ತಯಾರಾದರೂ ಅಂದಾಜು 1.20 ಲಕ್ಷ ರೂ. ಗಳಿಸುತ್ತಾರೆ. ಅದರಲ್ಲಿ 30 ಸಾವಿರ ರೂ. ವೆಚ್ಚ ತೆಗೆದರೆ 90 ಸಾವಿರ ರೂ. ಲಾಭ ಗಳಿಸಬಹುದು ಎನ್ನುತ್ತಾರೆ ಈ ಸಹೋದರರು. ಅಲ್ಲದೆ ಸೆಗಣಿ, ಗೋಮೂತ್ರ ಕೂಡ ಮಾರಾಟ ಮಾಡಲಾಗುತ್ತಿದೆ. ಸಮೃದ್ಧ ಹಾಲು ನೀಡುವುದಕ್ಕೆ ಹೆಸರಾಗಿರುವ ಗೀರ್ ತಳಿಯ ಹಸುಗಳು ಎಲ್ಲ ಮಾದರಿಯ ಹವಾಮಾನಕ್ಕೂ ಒಗ್ಗಿಕೊಳ್ಳುವಂಥವು. ದೇಶೀಯ ಗೀರ್ ಹಸುಗಳ ಹಾಲು, ಗೋಮೂತ್ರ, ತುಪ್ಪ ಎಲ್ಲದಕ್ಕೂ ಅಪಾರ ಬೇಡಿಕೆ ಇದ್ದು, ಆಯುರ್ವೇದ, ಪಂಚಗವ್ಯ ಚಿಕಿತ್ಸೆಗಳಲ್ಲಿ ಇದು ಬಳಕೆಯಾಗುತ್ತಿದೆ.

Date of Publication 25, January 2018

पुंगव PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10th and 25th of every Month REG.NO.CPMG/KA/BGS/102/2018-20

FORTNIGHTLY 1-2-2018



# ನಿರ್ಲಕ್ಷ್ಯಕ್ಕೊಳಗಾದ ಪುರಾತನ ದೇಗುಲಗಳಲ್ಲಿ ಯುವಪಡೆಯಿಂದ ಶ್ರಮದಾನ

ಭಾರತ ಪುರಾತನ ಟ್ರಸ್ಟ್ ಹೆಸರಿನಲ್ಲಿ ಒಟ್ಟುಗೂಡಿರುವ ಒಂದಿಷ್ಟು ಸಮಾನಮನಸ್ಕ ಯುವಕರು ಭಾರತೀಯ ಪುರಾತತ್ವ ಇಲಾಖೆ ಮತ್ತು ಜಿಲ್ಲಾಡಳಿತದಿಂದ ನಿರ್ಲಕ್ಷ್ಯಕ್ಕೊಳಗಾಗಿರುವ ಪುರಾತನ ದೇಗುಲಗಳ ರಕ್ಷಣೆಗೆ ಮುಂದಾಗಿದೆ. ಯಾವುದೇ ಪ್ರಸಿದ್ಧಿಯ ಗೀಳಿಗಂಟಿಕೊಳ್ಳದೇ ಸದ್ದಿಲ್ಲದೇ ಕೆಲಸ ನಡೆಸುತ್ತಿರುವ ಈ ತಂಡದಲ್ಲಿ ವಿದ್ಯಾರ್ಥಿಗಳು, ಕೃಷಿಕರು, ಇಂಜಿನಿಯರ್‌ಗಳು ಹಾಗೂ ಸ್ಥಳೀಯರು ಸೇರಿದ್ದು ಸಾಮಾಜಿಕ ಜಾಲತಾಣಗಳ ಸಂಪರ್ಕದಲ್ಲಿ ಒಂದಾಗಿ ಪ್ರತಿ ಭಾನುವಾರ ಈ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.

ಮೊದಲು ನಿರ್ವಹಣೆಯಿಲ್ಲದೇ ಹಾಳಾಗಿ ಬಿದ್ದಿರುವ ಪುರಾತನ ದೇಗುಲಗಳನ್ನು ಗುರುತಿಸಲಾಗುತ್ತದೆ. ಇಂತಹ ದೇಗುಲಗಳನ್ನು ಸ್ವಚ್ಛಗೊಳಿಸುವ ಸಲುವಾಗಿ ಸಾಮಾಜಿಕ ಜಾಲತಾಣಗಳ ಮೂಲಕ ಜಾಗೃತಿ ಮೂಡಿಸಲಾಗುತ್ತದೆ. ದೇಗುಲಗಳ ರಕ್ಷಣೆಯಲ್ಲಿ ಕೈಜೋಡಿಸಲು ಶ್ರಮದಾನದಲ್ಲಿ ಸೇರಿಕೊಳ್ಳಲು ಆಸಕ್ತಿಯುಳ್ಳವರನ್ನೂ ಸಹ ಆಹ್ವಾನಿಸಲಾಗುತ್ತದೆ. ಸ್ವಯಂಸೇವಕರ ಶ್ರಮದಾನದ ಮೂಲಕ ದೇವಸ್ಥಾನದ ಆವರಣದ



ಕಳೆತೆಗೆಯುವುದು, ಕಸಗಳನ್ನು ಸ್ವಚ್ಛಗೊಳಿಸುವುದು, ದಾರಿಯನ್ನು ಸ್ವಚ್ಛಗೊಳಿಸಿ, ಸುತ್ತಲಿನ ಪರಿಸರವನ್ನು ಶುದ್ಧಗೊಳಿಸಿ ಪ್ರಾಚೀನ ಪಾವಿತ್ರ್ಯತೆ ಮರುಕಳಿಸುವಂತೆ ಮಾಡುವ ಕೆಲಸದಲ್ಲಿ ಭಾರತ ಪುರಾತನ ಟ್ರಸ್ಟ್ ತೊಡಗಿಕೊಂಡಿದೆ.

"ನಿರ್ಲಕ್ಷಕ್ಕೊಳಗಾದ ದೇವಸ್ಥಾನಗಳನ್ನು ಶುದ್ಧಗೊಳಿಸಿ ಅಲ್ಲಿ ನಿರಂತರ ಪೂಜೆ ಅರ್ಚನೆ ನಡೆಯುವಂತೆ ಮಾಡುವುದು ನಮ್ಮ ಕರ್ತವ್ಯ. ಅನೇಕ ವರ್ಷಗಳಿಂದ ಭಾರತೀಯ ಪುರಾತತ್ವ ಇಲಾಖೆ ಹಿಂದು ದೇವಸ್ಥಾನಗಳನ್ನು ನಿರ್ಲಕ್ಷಿಸಿದೆ. ಹಿಂದುತ್ವದ ಸೇವೆಯಲ್ಲಿ ಅಂತಹ ದೇವಸ್ಥಾನಗಳನ್ನು ಶುದ್ಧಗೊಳಿಸಿ ರಕ್ಷಿಸಲು ನಾವು ನಿರ್ಧರಿಸಿದ್ದೇವೆ" ಎನ್ನುತ್ತಾರೆ ಭಾರತ ಪುರಾತನ ಟ್ರಸ್ಟಿನ ಪ್ರಮುಖ ರೂವಾರಿ ಗಿರೀಶ್ ಭಾರಧ್ವಾಜ್.

ಇತ್ತೀಚೆಗೆ ಭಾರತ ಪುರಾತನ ಟ್ರಸ್ಟ್ ಚಿಕ್ಕಮಗಳೂರಿನ ಕಡೂರು ತಾಲೂಕಿನ ಕೆರೆಸಂತೆಯ ಪ್ರಭು ಜಯ ಜನಾರ್ಧನ ಸ್ವಾಮಿ ದೇವಸ್ಥಾನ, ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನ, ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಲಕ್ಷ್ಮೀ ಜನಾರ್ಧನ ದೇವಸ್ಥಾನಗಳನ್ನು ಶುಚಿಗೊಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ ಅನೇಕ ಪುರಾತನ ದೇಗುಲಗಳಲ್ಲಿ ಸ್ವಚ್ಛತಾಕಾರ್ಯ ನಡೆಸಲು ಟ್ರಸ್ಟ್ ಗುರುತಿಸಿದೆ.

## 'ಆಧಾರ್'ದಿಂದಾದ ಒಂದಿಷ್ಟು ಲಾಭಗಳು




ಭಾರತದ ನಿವಾಸಿಗಳಿಗೆ ಅವರ ಬಯೋಮೆಟ್ರಿಕ್ ಮತ್ತು ವಾಸದ ಮಾಹಿತಿಯ ಆಧರಿಸಿ ಹನ್ನೆರಡು ಅಂಕಿಗಳ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡುವ ಯೋಜನೆಯೇ ಆಧಾರ್. 2009ರಲ್ಲಿ ಆರಂಭವಾದಾಗಿನಿಂದಲೂ ಒಂದಿಲ್ಲೊಂದು ವಿವಾದಕ್ಕೆ ಸಿಲುಕುತ್ತಲೇ ಬಂದಿದೆ. ಸರ್ಕಾರಿ ಸವಲತ್ತುಗಳ ಸಮರ್ಥ ವಿತರಣೆಗಾಗಿ ಐಚ್ಛಿಕವಾಗಿ ದೇಶದ ನಾಗರಿಕರು ನೋಂದಾಯಿಸಿಕೊಳ್ಳಬೇಕು ಎಂದು ಆರಂಭವಾದ ಈ ಯೋಜನೆಯ ಅಡಿಯಲ್ಲಿ 2017ರ ನವೆಂಬರ್ ಹೊತ್ತಿಗೆ 119 ಕೋಟಿಗೂ ಹೆಚ್ಚು ಜನರು ನೋಂದಾಯಿಸಿಕೊಂಡಿದ್ದು ಇದು ವಿಶ್ವದ ಅತಿದೊಡ್ಡ ಬಯೋಮೆಟ್ರಿಕ್ ಗುರುತು ವ್ಯವಸ್ಥೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಎಲ್‌ಪಿಜಿ ಸಬ್ಸಿಡಿ ಪಡೆಯಲು, ಸರ್ಕಾರಿ ಪಡಿತರ, ಮೊಬೈಲ್, ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವಲ್ಲಿ, ಬ್ಯಾಂಕ್ ಅಕೌಂಟ್‌ಗಳು ಮೊದಲಾದವುಗಳಿಗೆ ಆಧಾರ್ ಜೋಡಿಸುವುದನ್ನು ಕಡ್ಡಾಯ ಮಾಡಿದಾಗಿನಿಂದ ಅನೇಕ ಪರವಿರೋಧ ಚರ್ಚೆಗಳು ನಡೆದವು. ದೇಶದ ನಾಗರಿಕರಷ್ಟೇ ಅಲ್ಲದೇ ಬಾಂಗ್ಲಾದೇಶಿ ಅಕ್ರಮ ವಲಸಿಗರೂ ಆಧಾರ್ ಪಡೆದುಕೊಂಡಿದ್ದು ವರದಿಯಾಯಿತು. ಕಳೆದ ಅಗಸ್ಟ್‌ನಲ್ಲಿ ಸುಪ್ರೀಂ ಕೋರ್ಟ್ ಗೌಪ್ಯತೆಯ ಮೂಲಭೂತ ಹಕ್ಕು ಎಂದು ಘೋಷಿಸಿದಾಗಿನಿಂದ ಆಧಾರ್ ಕುರಿತು ಒಂದು ವರ್ಗದಿಂದ ವ್ಯಾಪಕ ವಿರೋಧ ಕಂಡುಬರುತ್ತಿದೆ. ಹಾಗೆಯೇ ಆಧಾರ್ ಮಾಹಿತಿಯು ಸೋರಿಕೆಯಾಗಿದೆ ಎನ್ನುವ ಆರೋಪಗಳೂ ಕೇಳಿ ಬರುತ್ತಿದ್ದು ಮಾಹಿತಿ ಸುರಕ್ಷತೆಯ ಬಗ್ಗೆಯೇ ಪ್ರಶ್ನೆಗಳೆದ್ದವು.

**ಇವೆಲ್ಲದರ ನಡುವೆ ಆಧಾರ್‌ನಿಂದಾಗಿ ಗುರುತಿಸಬಹುದಾದ ಒಂದಿಷ್ಟು ಲಾಭಗಳೂ ಆಗಿವೆ:**

- 3.3 ಕೋಟಿ ಅಕ್ರಮ ಗ್ಯಾಸ್ ಸಂಪರ್ಕಗಳನ್ನು ಕಡಿತಗೊಳಿಸಲಾಗಿ ಸರ್ಕಾರದ ಗ್ಯಾಸ್ ಸಬ್ಸಿಡಿ ಲೆಕ್ಕದಲ್ಲಿ 21 ಸಾವಿರ ಕೋಟಿ ರೂಪಾಯಿಗಳ ಉಳಿತಾಯವಾಯಿತು.
- ಜನ್‌ಧನ್, ಆಧಾರ್ ಮತ್ತು ಮೊಬೈಲ್‌ಗಳ ಜೋಡಣೆಯಿಂದ ಜನರ ಖಾತೆಗೆ ಸಬ್ಸಿಡಿ ನೇರ ವರ್ಗಾವಣೆಯಿಂದಾಗಿ ಸೋರಿಕೆ ತಪ್ಪಿ 64 ಸಾವಿರ ಕೋಟಿ ರೂಪಾಯಿಗಳ ಉಳಿತಾಯವಾಯಿತು.
- ಮಾನವಸಂಪನ್ಮೂಲ ಇಲಾಖೆಯು ಉನ್ನತ ಶಿಕ್ಷಣ ಇಲಾಖೆಯಲ್ಲಿ ಲೆಕ್ಕಕ್ಕೆ ಮಾತ್ರ ಇರುವ ಸುಮಾರು 1.3 ಲಕ್ಷ ಕೊಟಿ ಶಿಕ್ಷಕರನ್ನು ಕಂಡುಹಿಡಿಯಿತು.
- ಆಧಾರ್‌ನಿಂದಾಗಿ ಸುಮಾರು ಐದುನೂರು ಕಳೆದುಹೋದ ಮಕ್ಕಳು ಪಾಲಕರ ಮಡಿಲು ಸೇರಿದರು.
- ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸುಮಾರು 87 ಲಕ್ಷ ನಕಲಿ ಕಾರ್ಡ್‌ಗಳು ಸಿಕ್ಕಿಬಿದ್ದವು
- ಸುಮಾರು 1.6 ಕೋಟಿಗೂ ಅಧಿಕ ನಕಲಿ ರೇಶನ್ ಕಾರ್ಡ್‌ಗಳು ಕೊನೆಗೊಂಡವು
- ಶಾಲಾ ಮಕ್ಕಳ ಬಿಸಿಯೂಟದಲ್ಲಿ ಸುಳ್ಳು ಸಂಖ್ಯೆ ನೀಡಿ ಮೋಸ ಮಾಡುತ್ತಿದ್ದುದು ಕಂಡುಬಂದು ಮೂರು ರಾಜ್ಯಗಳಲ್ಲಿ ಇಂತಹ 4.4 ಲಕ್ಷ ಮಕ್ಕಳ ಸಂಖ್ಯೆ ಕಡಿಮೆಯಾಯಿತು.

## ಮಕ್ಕಳನ್ನು ಶಾಲೆಗೆ ಕಳುಹಿಸಲು ಗುಡ್ಡಬಗೆದು ರಸ್ತೆ ನಿರ್ಮಿಸಿದ ಸಾಹಸಿ



ತನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕಳೆದ ಎರಡು ವರ್ಷಗಳಿಂದ ಒಬ್ಬಂಟಿಯಾಗಿ ಪ್ರತಿನಿತ್ಯ ಎಂಟು ಗಂಟೆಗಳ ಕಾಲ ಗುಡ್ಡ ಅಗೆದು 8 ಕಿ.ಮೀ. ರಸ್ತೆ ನಿರ್ಮಿಸುವ ಮೂಲಕ ಒಡಿಶಾದ ಜಲಂದರ್ ನಾಯಕ್ ಅಸಾಧಾರಣವಾದ ಸಾಹಸ ಮೆರೆದಿದ್ದಾರೆ.

ಒಡಿಶಾ ರಾಜ್ಯದ ಕಂಧಮಾಲ್ ಜಿಲ್ಲೆಯ ಗುಮ್ಸಾಹಿಯ ಜಲಂಧರ್ ನಾಯಕ್ (45) ಅವರು ಬುಡಕಟ್ಟು ವರ್ಗಕ್ಕೆ ಸೇರಿದವರು. ಅನಕ್ಷರಸ್ಥರಾಗಿರುವ ಅವರು ವೃತ್ತಿಯಲ್ಲಿ ತರಕಾರಿ ವ್ಯಾಪಾರಿ. ಗುಮ್ಸಾಹಿ ಗ್ರಾಮದಲ್ಲಿ ಮೂಲಸೌಕರ್ಯವಿಲ್ಲದುದರಿಂದ ಉಳಿದವರೆಲ್ಲ ಬಹಳ ವರ್ಷಗಳ ಹಿಂದೆಯೇ ಊರು ತೊರೆದಿದ್ದರು. ಹೀಗಾಗಿ ಗ್ರಾಮದಲ್ಲಿ ನಾಯಕ್ ಅವರ ಕುಟುಂಬ ಮಾತ್ರ ವಾಸಿಸುತ್ತಿದೆ. ತನ್ನ ಮೂವರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಬೇಕೆಂಬ ಆಸೆಯಿಂದ ಸಮೀಪದ ಫುಲಬಾನಿಯ ಶಾಲೆಗೆ ಸೇರಿಸಿದರು. ಇದಕ್ಕಾಗಿ ಮಕ್ಕಳು ಪ್ರತಿನಿತ್ಯ 15 ಕಿ.ಮೀ. ಉದ್ದದ ಗುಡ್ಡವನ್ನು ಹತ್ತಿ ಇಳಿಯುವುದನ್ನು ನೋಡಿದ ಅವರು ಏಕಾಂಗಿಯಾಗಿ ಗುಡ್ಡ ಕೊರೆದು ರಸ್ತೆ ನಿರ್ಮಿಸುವ ಕೆಲಸಕ್ಕೆ ಮುಂದಾದರು. ಯಾರ ಸಹಾಯವೂ ಇಲ್ಲದೇ ಸತತ 2 ವರ್ಷಗಳ ಗುಡ್ಡ ಅಗೆದು 8 ಕಿ.ಮೀ. ರಸ್ತೆ ನಿರ್ಮಿಸಿರುವ ಜಲಂದರ್ ಉಳಿದ 7 ಕಿ.ಮೀ. ಮಾರ್ಗವನ್ನು ಮುಂದಿನ ಮೂರು ವರ್ಷದೊಳಗೆ ಪೂರ್ಣಗೊಳಿಸುವುದಾಗಿ ವಿಶ್ವಾಸದಿಂದ ಹೇಳುತ್ತಾರೆ.

ಇದೀಗ ಇವರ ಈ ಕಾರ್ಯವನ್ನು ಗುರುತಿಸಿದ ಕಂಧಮಾಲ್ ಜಿಲ್ಲಾಧಿಕಾರಿ ಡಿ. ಬೃಂದಾ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೂಲಿ ನೀಡಲು ಮುಂದಾಗಿದ್ದಾರೆ. ರಸ್ತೆ ಪೂರ್ಣಗೊಳಿಸಲು ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದ್ದಾರೆ. ಜಲಂಧರ್ ಅವರ ಈ ಭಗೀರಥ ಪ್ರಯತ್ನವನ್ನು ಗುರುತಿಸಿ ಜಿಲ್ಲಾಡಳಿತ 'ಕಂದಮಾಲ್ ಉತ್ಸವ'ದಲ್ಲಿ ಗೌರವ ಸಲ್ಲಿಸಲಿದೆ.

ಪತ್ನಿಯನ್ನು ಆಸ್ಪತ್ರೆಗೆ ಕೊಂಡೊಯ್ಯುವ ಮಾರ್ಗಕ್ಕೆ ಅಡ್ಡವಾದ ಪ್ರಸವ ವೇದನೆಯಿಂದ ಬಳಲುತ್ತಿದ್ದ ಪತ್ನಿಯನ್ನು ಶೀಘ್ರ ಆಸ್ಪತ್ರೆಗೆ ಕರೆದೊಯ್ಯಲು ಬೆಟ್ಟದ ಮಾರ್ಗ ಅಡ್ಡವಾದ ಕಾರಣ ಆಕೆ ತೋಳ ತೆಕ್ಕೆಯಲ್ಲೇ ಪ್ರಾಣಬಿಟ್ಟ ದಾರುಣ ಘಟನೆಯಿಂದ ನೊಂದು ಸತತ 22 ವರ್ಷಗಳ ಕಾಲ ಬೆಟ್ಟವನ್ನು ಕೊರೆದು ರಸ್ತೆ ನಿರ್ಮಿಸಿದ ಬಿಹಾರದ ದಶರಥ್ ಮಾಂಜಿಯಂತೆಯೇ ಜಲಂಧರ್ ನಾಯಕ್ ಕಾರ್ಯವೂ ಪ್ರೇರಣಾದಾಯಿಯಾಗಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.